# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 385 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಾಲೆಯ ಮಕ್ಕಳಿಗೆ ಗುಣಮಟ್ಟದ ಆಹಾರ ನೀಡುವ ಉದ್ದೇಶದಿಂದ ಅಜೀಂ ಪ್ರೇಮ್‌ಜೀ ಫೌಂಡೇಶನ್‌ನ ನವರು ದೇಣಿಗೆ ನೀಡಿರುವುದು ನಿಜವೇ; ನೀಡಿದ್ದಲ್ಲಿ ಯಾವಾಗಿನಿಂದ ಎಷ್ಟೆಷ್ಟು ದೇಣಿಗೆಯನ್ನು ನೀಡಿರುತ್ತಾರೆ: (ಕಳೆದ 03 ವರ್ಷಗಳ ಮಾಹಿತಿ ಒದಗಿಸುವುದು)</td><td>ಹೌದು, ಅಜೀಂ ಪ್ರೇಮ್‌ಜೀ ಫೌಂಡೇಶನ್ ಸಂಸ್ಥೆಯಿಂದ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರದಲ್ಲಿ 04 ದಿನ ಪೂರಕ ಪೌಷ್ಠಿಕ ಆಹಾರದ ರೂಪದಲ್ಲಿ ಮೊಟ್ಟೆ ಅಥವಾ ಬಾಳೆಹಣ್ಣನ್ನು ವಿತರಿಸಲು ದೇಣಿಗೆಯನ್ನು ನೀಡಲಾಗುತ್ತಿದೆ.<br><br>ಈ ಕಾರ್ಯಕ್ರಮವನ್ನು ದಿನಾಂಕ: 25.09.2024 ರಿಂದ ಪ್ರಾರಂಭಿಸಲಾಗಿರುತ್ತದೆ. ಸದರಿ ಸಂಸ್ಥೆಯಿಂದ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 03 ಕಂತುಗಳಲ್ಲಿ ಒಟ್ಟಾರೆಯಾಗಿ ರೂ.29680.76 ಲಕ್ಷಗಳ ಅನುದಾನವನ್ನು ನೀಡಲಾಗಿದೆ ವಿವರಗಳು ಕೆಳಕಂಡಂತಿದೆ.<br><br>
<table>
<tr><th>ಕಂತುಗಳು</th><th>ಬಿಡುಗಡೆ ಮಾಡಲಾದ ಅನುದಾನ ರೂ ಲಕ್ಷಗಳಲ್ಲಿ</th></tr>
<tr><td>1ನೇ ಕಂತು</td><td>2652.67</td></tr>
<tr><td>2ನೇ ಕಂತು</td><td>13263.35</td></tr>
<tr><td>3ನೇ ಕಂತು</td><td>13764.74</td></tr>
<tr><td>ಒಟ್ಟು</td><td>29680.76</td></tr>
</table></td></tr>
<tr><td>ಆ)</td><td>ಈ ಅಜೀಂ ಪ್ರೇಮ್‌ಜೀ ಫೌಂಡೇಶನ್‌ನನವರು ನೀಡಿರುವ ದೇಣಿಗೆಯನ್ನು ಯಾವ ಯಾವ ಶಾಲೆಗಳಲ್ಲಿ ಯಾವ ಉದ್ದೇಶಕ್ಕೆ ಬಳಸಲಾಗುತ್ತಿದೆ. ಮಾಹಿತಿ ಒದಗಿಸುವುದು: (ಯಾವಯಾವ ಜಿಲ್ಲೆಗಳಿಗೆ)</td><td>ಅಜೀಂ ಪ್ರೇಮ್‌ಜೀ ಫೌಂಡೇಶನ್ ಸಂಸ್ಥೆಯಿಂದ ನೀಡಿರುವ ದೇಣಿಗೆಯನ್ನು ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರದಲ್ಲಿ 04 ದಿನ ಪೂರಕ ಪೌಷ್ಠಿಕ ಆಹಾರದ ರೂಪದಲ್ಲಿ ಮೊಟ್ಟೆ ಅಥವಾ ಬಾಳೆಹಣ್ಣನ್ನು ವಿತರಿಸಲು ಬಳಸಲಾಗುತ್ತಿದೆ.</td></tr>
<tr><td>ಇ)</td><td>ಸದರಿ ಫೌಂಡೇಶನ್‌ನ ನವರು ಇಲಾಖೆಯ ಅನುಮತಿಯೊಂದಿಗೆ ರಾಜ್ಯದ 367 ಶಾಲೆಗಳಿಗೆ ಭೇಟಿ ನೀಡಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆಯೇ ಸಲ್ಲಿಸಿದ್ದಲ್ಲಿ ಅದರ ವಿವರಗಳೇನು;</td><td>ಅಜೀಂ ಪ್ರೇಮ್ ಜೀ ಫೌಂಡೇಶನ್‌ನವರು ಶಾಲಾ ಮಕ್ಕಳಿಗೆ ವಾರದಲ್ಲಿ 04 ದಿನ ಪೂರಕ ಪೌಷ್ಠಿಕ ಆಹಾರದ ರೂಪದಲ್ಲಿ ಮೊಟ್ಟೆ/ಬಾಳೆಹಣ್ಣನ್ನು ವಿತರಿಸಲು ಆರ್ಥಿಕ ನೆರವನ್ನು ನೀಡುತ್ತಿರುವ ಹಿನ್ನೆಲೆಯಲ್ಲಿ ಶಾಲೆಗಳಲ್ಲಿ ಸದರಿ ಕಾರ್ಯಕ್ರಮದ ಅನುಷ್ಠಾನದ ಪ್ರಗತಿ ಮತ್ತು ಅನುದಾನದ ಸದ್ಬಳಕೆಯನ್ನು ಖಾತ್ರಿ</td></tr>
</table>

| | | |
|---|---|---|
| | | ಪಡಿಸಿಕೊಳ್ಳಲು ಸದರಿ ಸಂಸ್ಥೆಯು ಇಲಾಖೆಯ ಅನುಮತಿ ಪಡೆದು RANDOM ಆಗಿ ಶಾಲೆಗಳಿಗೆ ಭೇಟಿ ನೀಡುತ್ತಿರುವರು, ಶಾಲೆಯಲ್ಲಿ ಅವಲೋಕಿಸಿದ ಅಂಶಗಳನ್ನು ಸುಧಾರಣೆಗಾಗಿ ಇಲಾಖೆಯೊಂದಿಗೆ ಚರ್ಚಿಸಿ ಸಲಹೆಗಳನ್ನು ನೀಡಿರುತ್ತಾರೆ. |
| ಈ) | ಇಂತಹ ಖಾಸಗಿಯವರು ದೇಣಿಗೆಯಾಗಿ ನೀಡಿರುವ ಹಣದಲ್ಲಿ ಸಹ ಸರ್ಕಾರ ಮಕ್ಕಳಿಗೆ ಸರಿಯಾದ ಆಹಾರ (ಮೊಟ್ಟೆ, ಬಾಳೆಹಣ್ಣು) ಒದಗಿಸದೇ ಲೋಪ ಎಸಗಿರುವುದಕ್ಕೆ ಸರ್ಕಾರದ ಕ್ರಮಗಳೇನು: ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು: | ಮಧ್ಯಾಹ್ನ ಉಪಹಾರ ಯೋಜನೆಯಡಿ ಪೂರಕ ಪೌಷ್ಠಿಕ ಆಹಾರವಾಗಿ ಮೊಟ್ಟೆ, ಮೊಟ್ಟೆ ತಿನ್ನದ ಮಕ್ಕಳಿಗೆ ಮೊಟ್ಟೆ ಬದಲಾಗಿ ಶಾಲೆಗಳಲ್ಲಿ ಈ ಹಿಂದೆ ವಿತರಣೆ ಮಾಡಲಾಗುತ್ತಿರುವ ಚಿಕ್ಕಿಯು ನಿಗದಿತ ತೂಕ ಪ್ರಮಾಣದಲ್ಲಿ ಇಲ್ಲದಿರುವುದು ಹಾಗೂ ಸ್ವಚ್ಛತೆ ನೈರ್ಮಲ್ಯದಿಂದ ಸಿದ್ಧಪಡಿಸದೇ ವಿತರಿಸಿರುವುದು ಹಾಗೂ ಸಮರ್ಪಕವಾಗಿ ಸಂಗ್ರಹಿಸದೇ ಇರುವುದು ಹಾಗೂ ಅವಧಿ ಮೀರಿದ ಚಿಕ್ಕಿಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಹಾಗೂ ಅಂತಹ ಚಿಕ್ಕಿಗಳನ್ನು ಸೇವಿಸಿದಲ್ಲಿ ಮಕ್ಕಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಚಿಕ್ಕಿ ವಿತರಣೆಯನ್ನು ಸ್ಥಗಿತಗೊಳಿಸಿ ಮೊಟ್ಟೆ ಅಥವಾ ಬಾಳೆಹಣ್ಣುಗಳನ್ನು ಮಾತ್ರ ವಿತರಿಸುವಂತೆ ಸರ್ಕಾರದ ಆದೇಶ ಸಂಖ್ಯೆ: ಇಪಿ 99 ಎಂಎಂಎಸ್ 2024 ದಿನಾಂಕ: 17.02.2025 ರಲ್ಲಿ ಆದೇಶಿಸಲಾಗಿದೆ.<br>ಪ್ರಸ್ತುತ ಶಾಲೆಗಳಲ್ಲಿ ಪೂರಕ ಪೌಷ್ಠಿಕ ಆಹಾರವಾಗಿ ಮೊಟ್ಟೆ ಅಥವಾ ಬಾಳೆಹಣ್ಣನ್ನು ಮಾತ್ರ ವಿತರಿಸಲು ನಿರ್ದೇಶನ ನೀಡಿ ಮಕ್ಕಳಿಗೆ ಇಲಾಖೆ ನಿಗದಿಪಡಿಸಿ SOP ಯಂತೆ ಗುಣಮಟ್ಟದಿಂದ ಕೂಡಿರುವ ಮೊಟ್ಟೆ ಅಥವಾ ಬಾಳೆಹಣ್ಣನ್ನು ವಿತರಿಸಲು ಕ್ರಮವಹಿಸಲಾಗಿದೆ. |
| ಉ) | ಅಜೀಂ ಪ್ರೇಮ್‌ಜೀ ಫೌಂಡೇಶನ್‌ನ ನವರು ದೇಣಿಗೆ ನೀಡಿದ್ದರೂ ಸಹ ಪಿ.ಎಂ ಪೋಷಣ್ ಯೋಜನೆಯಲ್ಲಿ ಆಗಿರುವ ಲೋಪಗಳೇನು? (ಮಾಹಿತಿಯನ್ನು ಒದಗಿಸುವುದು) | ಪ್ರಸ್ತುತ ಶಾಲೆಗಳಲ್ಲಿ ಪೂರಕ ಪೌಷ್ಠಿಕ ಆಹಾರವಾಗಿ ಮೊಟ್ಟೆ ಅಥವಾ ಬಾಳೆಹಣ್ಣನ್ನು ಮಾತ್ರ ವಿತರಿಸಲು ನಿರ್ದೇಶನ ನೀಡಲಾಗಿದೆ. ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ಲೋಪವಾಗದಂತೆ ಅನುಷ್ಠಾನಾಧಿಕಾರಿಗಳಿಗೆ ಸೂಚನೆ ನೀಡಿ ಕ್ರಮವಹಿಸಲಾಗಿದೆ. |

ಇಪಿ 25 ಎಂಎಂಎಸ್ 2025

**(ಎಸ್.ಮಧು ಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**